ಶ್ರೀ ಬಸವರಾಜ್ ಎನ್ ಶಿವಣ್ಣನವರ್: ಮಾನ್ಯ ಅಧ್ಯಕ್ಷರೆ, ಈ ಒಂದು ಕಾರ್ಖಾನೆಯವರು ಸಂಸ್ಕರಣ ಘಟಕವನ್ನು ಹಾಕಿದ್ದೇವೆಂದು ತಿಳಿಸಿದ್ದಾರೆ. ಒಂದು ವೇಳೆ ಅವರು ಅದನ್ನು; ಪ್ರಾರಂಭ ಮಾಡದೇ ಇದ್ದರೆ ಸ್ವತಃ ನಾನೇ ಕಾರ್ಖಾನೆಗೆ ಭೇಟಿ ಕೊಟ್ಟು ಆ ಸಂಸ್ಕರಣ ಘಟಕವನ್ನು ಪ್ರಾರಂಭಿಸಿ ಕಲುಷಿತ ನೀರನ್ನು ಶುದ್ಧಿಗೊಳಿಸಲಿಕ್ಕೆ ಒಂದು ವ್ಯವಸ್ಥೆಯನ್ನು ಮಾಡುತ್ತೇನೆ. ಅದೇ ರೀತಿ ಬೇರೆ ಬೇರೆ ಎಲ್ಲಿ ಈ ತರಹವು ಇದ್ದರೆ ಅದನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಅವನ್ನು ಶುದ್ಧಿಗೊಳಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ವಿಷಯ: ಮೇದ ಜನಾಂಗಕ್ಕೆ ಬೊಂಬುಗಳನ್ನು ಉಚಿತವಾಗಿ ವಿತರಣೆ

469 (3180)

ಶ್ರೀ ಹೆಚ್.ಡಿ.ಬಸವರಾಜ (ವಿರಾಜಪೇಟೆ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೊಂಬುಗಳ ಮಾರಾಟದಿಂದ 1994-95, 95-96 ಹಾಗೂ 1996-97ನೇ ಸಾಲಿನಲ್ಲಿ ಸರ್ಕಾರಕ್ಕೆ ಬಂದ ಆದಾಯ ಎಷ್ಟು?

ಆ) ಮೇದ ಜನಾಂಗಕ್ಕೆ ಉಚಿತವಾಗಿ ಪ್ರತಿ ಕುಟುಂಬಕ್ಕೆ ಎಷ್ಟು ಬೊಂಬುಗಳನ್ನು ನೀಡಲಾಗುತ್ತಿದೆ ಹಾಗೂ 1994-95, 95-96, 96-97ರಲ್ಲಿ ಎಷ್ಟು ಕುಟುಂಬಗಳಿಗೆ ಈ ರೀತಿ ಉಚಿತ ಹಂಚಿಕೆ ಮಾಡಲಾಗಿದೆ. (ವಿವರ ನೀಡುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಬೊಂಬುಗಳ ಮಾರಾಟದಿಂದ ಬಂದ ಆದಾಯ-

1994-95	1995-96	1996-97
ರೂ. ಲಕ್ಷಗಳಲ್ಲಿ	ರೂ. ಲಕ್ಷಗಳಲ್ಲಿ	ರೂ. ಲಕ್ಷಗಳಲ್ಲಿ
228.40	266.26	354.43

ಆ) ಉಚಿತವಾಗಿ ಸರಬಾರಜು ಮಾಡುತ್ತಿಲ್ಲ.

ಶ್ರೀ ಎಚ್.ಡಿ.ಬಸವರಾಜ್: ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಲ್ಲಿ ಬೊಂಬು ಮಾರಾಟದ ವಿವರಣೆವನ್ನು ನೀಡಿದ್ದಾರೆ. ಅದರಲ್ಲಿ 1994-95, 95-96, 96-97ರಲ್ಲಿ 228.40 ಲಕ್ಷ 266.26 ಲಕ್ಷ, 354.43 ಬೊಂಬುಗಳನ್ನು ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ. ಈ ಮೇದಾರ ಜನಾಂಗಕ್ಕೆ ಉಚಿತವಾಗಿ ನೀಡುವುದರ

ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಉಚಿತವಾಗಿ ಸರಬರಾಜು ಮಾಡುವುದಿಲ್ಲ ಎಂದು ಹೇಳಿದ್ದಾರೆ. ತಮ್ಮ ಮೂಲಕ ನಾನು ಮಾನ್ಯ ಅರಣ್ಯ ಸಚಿವರಲ್ಲಿ ಕೇಳಿಕೊಳ್ಳುವುದು ಏನೆಂದರೆ ನಮ್ಮ ಕರ್ನಾಟಕದಲ್ಲಿ ಸುಮಾರು 75 ಸಾವಿರ ಜನಸಂಖ್ಯೆ ಇಷ್ಟೇ ಇರುವುದು. ಬಹಳಷ್ಟು ಜನ ನಾಗರೀಕ ಜೀವನಕ್ಕೆ ಹೊಂದಿಕೊಳ್ಳಲು ಇವತ್ತಿಗೂ ಸಾಧ್ಯವಾಗಿಲ್ಲ. ಪರ್ಯಾಯ ವ್ಯವಸ್ಥೆಯನ್ನು ನಾವು ಮಾಡಿಕೊಂಡಿಲ್ಲ. ಈಗ ಪ್ಲಾಸ್ಟಿಕ್ ಯುಗ ಬಂದಿದೆ. ಇವತ್ತಿಗೂ ನಾವು ಬೊಂಬಿನಿಂದಲೇ ಜೀವನ ಸಾಗಿಸಿಕೊಂಡು ಬದುಕುತ್ತಿದ್ದೇವೆ. ಇಷ್ಟೊಂದು ವಹಿವಾಟು ನಡೆಸುತ್ತಿರುವ ಈ ಒಂದು ಅರಣ್ಯದಿಂದ ಬರುವಂತಹ ಉತ್ಪತ್ತಿಯಲ್ಲಿ ಪರಿಶಿಷ್ಟ ಜನಾಂಗಕ್ಕೆ ಸೇರಿದಂತಹ ಮೇದಾರ ಜನಾಂಗದವರಿಗೆ ತಾವೇನಾದರೂ ರಿಯಾಯತಿ ದರದಲ್ಲಿ ನೀಡುವುದಕ್ಕೆ ಸರ್ಕಾರ ಏನಾದರೂ ಪರಿಶೀಲನೆ ಮಾಡುತ್ತಿದೆಯೇ? ಇದು ನನ್ನ ಮೊದಲನೆಯ ಪ್ರಶ್ನೆ. ಈ ಪ್ರಶ್ನೆಗೆ ತಾವು ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸನ್ಮಾನ್ಯ ಅಧ್ಯಕ್ಷರೆ, ಮೇದ ಜನಾಂಗಕ್ಕೆ ಉಚಿತವಾಗಿ ಕೊಡುತ್ತೀರಾ ಎಂದು ಕೇಳಿದ್ದಾರೆ. ಬೇರೆ ಅಂಕಿ ಅಂಶ ಅವರೂ ಒಪ್ಪಿದ್ದಾರೆ, ಸರಿ ಇದೆ. ಮೇದಾರರಿಗೆ ಉಚಿತವಾಗಿ ನಾವು ಕೊಡುವುದಿಲ್ಲ ಎಂದು ಹೇಳಿದ್ದುದು ನಿಜ. ಏಕೆಂದರೆ ಕೊಡುವುದಕ್ಕೆ ಬರುವುದಿಲ್ಲ. ಅವರಿಗೆ ಒಂದು ಸೀನಿಯಾರಿಟಿ ರೇಟ್ ಸರ್ಕಾರ ಫಿಕ್ಸ್ ಮಾಡಿದೆ. ಆ ದರದ ಪ್ರಕಾರ ಅವರಿಗೆ ಕಡಿಮೆ ರೇಟಿನಲ್ಲಿ ಕೊಡುತ್ತೇವೆ. ಹೊರಗಡೆಯವರಿಗೆ ಬೇರೆ ಕೊಡುತ್ತೇವೆ. ಇತರರಿಗೆ ಬೇರೆ ರೇಟ್ ಇದೆ, ಇವರಿಗೆ ಬೇರೆ ರೇಟ್ ಇದೆ. ಸೀನಿಯಾರಿಟಿ ರೇಟ್ ಎಂದರೆ ಬೇಕಾದರೆ ಹೇಳುತ್ತೇನೆ. ನೂರು ಬೊಂಬಿಗೆ ಎಂದು ಫಿಕ್ಸ್ ಮಾಡಿದ್ದೇವೆ. 100 ಬೊಂಬು ಅವರಿಗೆ ಅಲಾಟ್ ಮಾಡುತ್ತೇವೆ. ದೊಡ್ಡ ಬೊಂಬು 100 ರೂಪಾಯಿ, ಬಿದಿರು, ಸಣ್ಣ ಬೊಂಬು 50 ರೂಪಾಯಿ, ಈ ಪ್ರಕಾರ ಫಿಕ್ಸ್ ಮಾಡಿದ್ದೇವೆ. ಇತರರಿಗೆ 250 ರೂಪಾಯಿ, ಸಣ್ಣ ಬೊಂಬು 75 ರೂಪಾಯಿ. ಹೀಗೆ ಬೇರೆ ಬೇರೆ ದರದಲ್ಲಿ ಕೊಡುತ್ತೇವೆ. ಆದರೆ ಪುಕ್ಕಟೆ ಕೊಡುವುದಕ್ಕೆ ಆಗುವುದಿಲ್ಲ. ಪರಿಶಿಷ್ಟ ಪಂಗಡಕ್ಕೆ ಎಂದು ನೀವು ಕೇಳಿದ್ದರೆ ನಾನು ಅದಕ್ಕೆ ಹೇಳುತ್ತಿದ್ದೆ. ಆದರೂ ಕೂಡ ಕೆಲವು ಮಾತು ಹೇಳಬಹುದು. ಏಕೆಂದರೆ ಪರಿಶಿಷ್ಟ ಜಾತಿ ಹಾಗೂ ಪಂಗಡದಲ್ಲಿ ವಿಶೇಷಘಟಕ ಯೋಜನೆಯಲ್ಲಿ ಅವರಿಗೆ ಪುಕ್ಕಟೆಯಾಗಿ ಕೊಡುತ್ತೇವೆ. ಅದರ ಮಾಹಿತಿ ನನ್ನ ಹತ್ತಿರ ಇದೆ. ಎಷ್ಟು ಅಂದರೆ ಬೇಕಾದರೆ ಹೇಳುತ್ತೇನೆ. 1994-95ರಲ್ಲಿ 1, 10, 400. 1995-96ರಲ್ಲಿ 2, 18, 436. 1996-97ರಲ್ಲಿ 1, 16, 900 ಈ ಪ್ರಕಾರ ನಾವು ಪುಕ್ಕಟೆಯಾಗಿ ಕೊಟ್ಟಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ವಿಶೇಷ ಘಟಕ ಯೋಜನೆಯಲ್ಲಿ ಕೊಟ್ಟಿದ್ದೇವೆ. ಮೇದಾರರಿಗೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಎಚ್.ಡಿ.ಬಸವರಾಜ್: ಈಗ ಪರಿಶಿಷ್ಟ ಪಂಗಡದವರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ನಾನು ಸ್ಪೆಸಿಫಿಕ್ ಆಗಿ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ

ಬರುತ್ತಿರುವಂತಹ ಮೇದರ ಜನಾಂಗದ ಬಗ್ಗೆ ಮಾತ್ರ ನಾನು ಮಾನ್ಯ ಸಚಿವರಲ್ಲಿ ಕೇಳಲಿಕ್ಕೆ ಇಚ್ಛಿಪಟ್ಟಿದ್ದು. ಬಹುಶಃ ಅವರಲ್ಲಿ ಮಾಹಿತಿ ಇಲ್ಲ ಎಂದು ಕಾಣಿಸುತ್ತದೆ. ಅವರೇನು ಮಾಡಿದ್ದಾರೆ? ಸುಮಾರು ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳು ಇವೆ. ಪರಿಶಿಷ್ಟ ಪಂಗಡದಲ್ಲಿ 49 ಜಾತಿಗಳು ಇವೆ. ಇವನ್ನು ಒಟ್ಟುಗೂಡಿಸಿ ಅವರು ಹೇಳುತ್ತಿದ್ದಾರೆ. ಬಹುಶಃ ಅದರ ಬಗ್ಗೆ ತಾವು ಮಾಹಿತಿ ತರಿಸಿಕೊಂಡು ಮೇದ ಜನಾಂಗಕ್ಕೆ ಕೊಡಬೇಕು. ಇದನ್ನು ನಂಬಿಕೊಂಡು ಬದುಕುತ್ತಿರುವುದು ನಾವು ಒಂದೇ ಜನಾಂಗದವರು. ಬೇರೆ ಜನಾಂಗದವರು ಬರೇ ಬೊಂಬಿನಿಂದ ಬದುಕುತ್ತಿಲ್ಲ. ಆದ್ದರಿಂದ ನಮಗೆ ಪರಿಶಿಷ್ಟ ಜನಾಂಗಕ್ಕೆ ಸೇರಿರುವುದರಿಂದ ತಾವು ಮೇದ ಜನಾಂಗದ ಪರಿಶಿಷ್ಟ ಪಂಗಡಕ್ಕೆ ನೀಡಬೇಕು ಎಂಬ ಆದೇಶವನ್ನು ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೊದಲನೆಯದಾಗಿ. ಎರಡನೆಯದಾಗಿ ತಾವು ಹೇಳಿದ್ದೀರಿ, ಮೇದ ಜನಾಂಗದವರಿಗೆ ರಿಯಾಯತಿ ದರದಲ್ಲಿ ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ ರಿಯಾಯತಿ ದರದಲ್ಲಿ ಕೊಡುತ್ತಿರುವಂತಹ ಬೊಂಬುಗಳು ವ್ಯವಸ್ಥಿತವಾಗಿ ಅವರಿಗೆ ತಲುಪುತ್ತಿಲ್ಲ. ತಾವು ಕೊಡುತ್ತಿರುವಂತಹ ಒಂದು ವಲಯಕ್ಕೆ ಹೋಯಿತು ಎಂದರೆ ಆ ವಲಯದಲ್ಲಿ ಸಿಗಲಿಲ್ಲ ಎಂದರೆ ಆ ವರ್ಗಕ್ಕೆ ಯಾವುದೇ ಒಂದು ಬೊಂಬು ಸಿಗುವುದಿಲ್ಲ. ಮತ್ತೆ ಇನ್ನೊಂದು ವಲಯಕ್ಕೆ ಹೋಗಬೇಕಾದರೂ ಸಹ ತಾವು ಅನುಮತಿ ನೀಡುವುದಿಲ್ಲ. ತಮ್ಮ ಇಲಾಖೆಯಲ್ಲಿರುವಂತಹ ಅರಣ್ಯ ಅಧಿಕಾರಿಗಳು ಬಹಳ ಕಿರುಕುಳ ಕೊಡುತ್ತಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ಪ್ರತಿ ಒಂದು ಕುಟುಂಬಕ್ಕೆ ಕೊಡುತ್ತಿರುವಂತಹದು, ಏಕೆಂದರೆ ಇವರು ಕುಲಕಸುಬಿನಿಂದ ಬದುಕುತ್ತಿರುವವರು. ನಾವು ಪ್ಲಾಸ್ಟಿಕ್‌ನಿಂದ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ರೇಷ್ಮೆ ಏನಾದರೂ ಬೆಳೆಯಬೇಕು, ಇವತ್ತು ರೇಷ್ಮೆ ಏನಾದರೂ ಕರ್ನಾಟಕದಲ್ಲಿದೆ ಎಂದರೆ ನಮ್ಮ ಜನಾಂಗದವರ ಕೊಡುಗೆ ಬಹಳಷ್ಟು ಇದೆ. ಇವತ್ತು ಜಾತಿನೇ ಆಗಲಿ, ತಟ್ಟಿನೇ ಆಗಲಿ, ಆ ರೇಷ್ಮೆ ಬಳಸಲಿಕ್ಕೆ ಚಂದ್ರಿಕೆನೇ ಆಗಲೀ ಮಾಡಬೇಕು ಎಂದರೆ ಬೇರೆ ವರ್ಗದವರ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಈ ಜನಾಂಗದವರು ಬದುಕಲಿಕ್ಕೋಸ್ಕರ ರಿಯಾಯತಿ ದರದಲ್ಲಿ ವ್ಯವಸ್ಥಿತ ದರದಲ್ಲಿ ಎಲ್ಲಾ ವಲಯಗಳಲ್ಲೂ ದೊರೆಯುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರ ಏನಾದರೂ ಬೊಂಬು ಕಾರ್ಪೊರೇಷನ್ ತೆರೆಯುವ ಆಲೋಚನೆ ಇತ್ತು ಎಂದರೆ ಮೇದ ಜನಾಂಗದವರಿಗೆ ಆದ್ಯತೆ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಮೂರನೆಯದಾಗಿ ಕಾಡಿನಲ್ಲಿ ಬಿದಿರು ಬೆಳೆಸುವಂತಹ ಒಂದು ವ್ಯವಸ್ಥೆ ಇದೆ. ಆ ವ್ಯವಸ್ಥೆಯಲ್ಲಿ ನಮ್ಮ ಜನಾಂಗಕ್ಕೆ ಅಂದರೆ ಮೇದರ ಜನಾಂಗಕ್ಕೆ ತಾವು ಆದ್ಯತೆ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನಾನು ಮೊದಲೇ ಹೇಳಿದ್ದೇನೆ. ಅವರು ಪ್ರಶ್ನೆ ಕೇಳಿರತಕ್ಕದ್ದು ಏನು ಅಂದರೆ ಮೇದಾರ ಜನಾಂಗಕ್ಕೆ ಉಚಿತವಾಗಿ ಪ್ರತಿ ಕುಟುಂಬಕ್ಕೆ

ಎಷ್ಟು ಬೊಂಬುಗಳನ್ನು ನೀಡಲಾಗುತ್ತಿದೆ ಹಾಗೂ 1994-95, 1995-96, 1996-97ರಲ್ಲಿ ಎಷ್ಟು ಕುಟುಂಬಗಳಿಗೆ ಈ ರೀತಿ ಉಚಿತ ಹಂಚಿಕೆ ಮಾಡಲಾಗಿದೆ ಎಂದು ಕೇಳಿದ್ದಾರೆ. ನಾವು ಕೊಡುತ್ತಿಲ್ಲ. ಅದಕ್ಕಾಗಿ ಉಚಿತವಾಗಿ ಸರಬರಾಜು ಮಾಡುತ್ತಿಲ್ಲ ಎಂದು ಹೇಳಿದ್ದೇವೆ. ರಿಯಾಯತಿ ದರದಲ್ಲಿ ಕೊಡುತ್ತಿದ್ದೇವೆ. ಆದರೇ ಉಚಿತವಾಗಿ ಕೊಡತಕ್ಕದ್ದು ಇಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಕೊಡುತ್ತಿದ್ದೇವೆ. ಮೇದಾರರು ಅದರಲ್ಲಿ ಬರುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ, ಅದು ನನಗೆ ಗೊತ್ತಿಲ್ಲ. ಅದನ್ನು ನೋಡಬೇಕು. ಅದರಲ್ಲಿ ಬರುತ್ತಾರೆಂದರೆ ನೋಡಬೇಕು. ವಿಶೇಷ ಘಟಕ ಯೋಜನೆಯಲ್ಲಿ ಕೊಡುತ್ತಿದ್ದೇವೆ.

ಶ್ರೀ ಎಚ್.ಡಿ.ಬಸವರಾಜ್: ನಾನೇ ಪರಿಶಿಷ್ಟ ಪಂಗಡಕ್ಕೆ ಸೇರಿದ್ದೇನೆ. ಆದರೆ ಗೊತ್ತಿಲ್ಲ ಎಂದು ತಾವು ದಯವಿಟ್ಟು ಹೇಳಬೇಡಿ. ತಮ್ಮ ಮುಂದೆ ಎಷ್ಟೋ ಸಾರಿ ಹೇಳಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಪರಿಶಿಷ್ಟ ಜಾತಿ, ಪಂಗಡದವರಿಗೆ ಉಚಿತವಾಗಿ ವಿಶೇಷಘಟಕ ಯೋಜನೆಯಲ್ಲಿ ಕೊಡುತ್ತಿದ್ದೇವೆ ಎಂದು ಹೇಳಿದ್ದೇನೆ. ಅವರಿಗೆ 50ರಿಂದ 100 ಬೊಂಬು ನಿಗದಿ ಮಾಡಿದ್ದೇವೆ.

ಅಧ್ಯಕ್ಷರು: ಅವರು ಪ್ರಶ್ನೆ ಕೇಳುವಾಗಲೂ ಹಾಗೆಯೇ ಮಾಡುತ್ತಾರೆ, ನೀವು ಉತ್ತರ ಕೂಡ ಹಾಗೆಯೇ ಕೊಡುತ್ತಿದ್ದೀರಿ. ನಾನು ಸುಮ್ಮನೆ ಇರಬೇಕೆಂದರೂ ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ರೆಗ್ಯುಲೇಟ್ ಮಾಡಲೇ ಬೇಕಾಗುತ್ತದೆ. ಅನುಸೂಚಿತ ಜಾತಿಗಳಿಗೆ ಪಂಗಡಗಳಿಗೆ ನಾನಾ ಜಾತಿಗಳನ್ನು ಸೇರಿಸಿರುತ್ತಾರೆ. ಬೋವಿ ಜನಾಂಗದವರು, ಲಮಾಣಿಗಳು, ಇತರೆ ಎಲ್ಲರೂ ಕೂಡ ಶಡ್ಯೂಲ್ಡ್ ಕಾಸ್ಟಿಗೆ ಬರುತ್ತಾರೆ. ಶೆಡ್ಯೂಲ್ಡ್ ಕಾಸ್ಟ್‌ನಲ್ಲಿ ಮತ್ತೆ ಲೆಫ್ಟ್, ರೈಟ್, ಬೇರೆ ಬೇರೆಯವರು ಬರುತ್ತಾರೆ. ಕೊರಮರು, ಕೊರಚರು ಬರುತ್ತಾರೆ. ಅನೇಕ ಜಾತಿಗಳವರು ಬರುತ್ತಾರೆ. ಜಾತಿವಾರು ಡೀಟೇಲ್ಸ್ ಕೊಡಿ ಎಂದರೆ ಯಾರೂ ಜಾತಿಯವರು ಇಟ್ಟಿರುವುದಿಲ್ಲ. ಕ್ಯಾಸ್ಟ್ ಸರ್ಟಿಫಿಕೇಟ್ ಅಷ್ಟೇ ಕೇಳುವುದು. ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಕೊಡಬೇಕಾಗಿದೆ. ಆದರಿಂದ ಮೇದಾರರಿಗೆ ಎಷ್ಟು ಕೊಟ್ಟರು? ಬೋವಿಗಳಿಗೆ ಎಷ್ಟು ಕೊಟ್ಟರು? ಲೆಫ್ಟ್‌ಗೆ ಎಷ್ಟು ಕೊಟ್ಟರು? ರೈಟ್‌ಗೆ ಎಷ್ಟು ಕೊಟ್ಟರು ಎಂಬ ಬಗ್ಗೆ ಅವರ ಹತ್ತಿರ ಡೀಟೇಲ್ಸ್ ಇರುವುದಿಲ್ಲ. ಶೆಡ್ಯೂಲ್ಡ್ ಕಾಸ್ಟ್ ಎಷ್ಟು ಇರುತ್ತದೆ ಎಂದು ಮಾಹಿತಿ ಇರುತ್ತದೆ. ಮೇದಾರರಿಗೆ ಅದು ಕುಲ ಕಸುಬು ಆಗಿರುವುದರಿಂದ ಅವರಿಗೆ ರಿಯಾಯತಿ ದರದಲ್ಲಿ ಕೊಟ್ಟರತಕ್ಕದ್ದನ್ನು ಮಾನ್ಯ ಸಚಿವರು ಹೇಳಿದ್ದಾರೆ. ನೀವು ಹೇಳತಕ್ಕದ್ದು ಬೊಂಬು ಕಾರ್ಪೊರೇಷನ್ ಮಾಡುತ್ತೀರಾ ಇಲ್ಲವಾ ಎಂದು. ಒಂದೊಂದು ಪ್ರಶ್ನೆಯನ್ನು ಅರ್ಧರ್ಧ ಗಂಟೆ ಮಾಡಿದರೆ ನಾನು ಪ್ರಶ್ನೋತ್ತರವನ್ನು ಮುಗಿಸಬೇಕು. ನನ್ನ ಕಷ್ಟ ಜಾಸ್ತಿ ಇದೆ. ತಾವು ಬೊಂಬು ಕಾರ್ಪೊರೇಷನ್‌ಗೆ ಉತ್ತರ ಕೊಡಿ. ಉಳಿದದ್ದು ಯಾವುದೂ

ಅಗತ್ಯ ಇಲ್ಲ. ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

11.40 ಎ.ಎಂ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಈಗಿರುವ ಕಾರ್ಪೋರೇಷನ್‌ಗಳನ್ನೇ ನಡೆಸಬೇಕಾದರೆ ಸಾಕುಸಾಕಾಗಿದೆ. ಇನ್ನು ಹೊಸ ಕಾರ್ಪೊರೇಷನ್ ಏಕೆ ಮಾಡಬೇಕಾಗಿದೆ?

ಶ್ರೀ ಎ.ರಾಮದಾಸ್: ಸಚಿವರು ಹೇಳಿದರು ಪ್ರತಿ ಲೈಸೆನ್ಸ್‌ಗೆ 100 ಬೊಂಬುಗಳನ್ನು ಕೊಡುತ್ತಿದ್ದೇವೆ ಎಂದು ಖಂಡಿತ ಇಲ್ಲ. ಕಳೆದ ವರ್ಷ 50 ಕೊಟ್ಟರು. ಈ ವರ್ಷ 25ಕ್ಕೆ ಇಳಿಸಿದ್ದಾರೆ. ಈ ವರ್ಷ ಅದರ ಬಗ್ಗೆ ಒಂದು ಪ್ರೊಟಿಸ್ಟ್ ಆಗಿದೆ. ಮತ್ತು ಪತ್ರಿಕೆಗಳಲ್ಲಿ ಫೇಕ್‌ಲೈಸೆನ್ಸ್ ನೀಡಿರುವ ಹಗರಣಗಳು ಬಂದಿವೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡರು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಕಂಪ್ಲೇಂಟ್ಸ್ ಬಂದರೆ ನಾನು ವಿಚಾರಣೆ ಮಾಡುತ್ತೇನೆ. ನೂರು ಬೊಂಬು ಸಿಗಲಿಲ್ಲ ಅಂದರೆ ಒಂದು ಕುಟುಂಬಕ್ಕೆ 50 ಬೊಂಬು ಕೊಡುತ್ತೇವೆ. ಏನು ತೊಂದರೆ ಇದೆಯೆಂದರೆ ಇರುವುದೇ 12ರಿಂದ 20 ವರ್ಷದ ತನಕ. ಹೂ ಬಂದುಬಿಡ್ತು ಅಂದರೆ ಸತ್ತುಹೋಯಿತು, ಪುನಃ ಬರುವುದಿಲ್ಲ, ಅದೇನು ಬೀಜ ಬಿಡುತ್ತೋ ಅದರಲ್ಲಿ ಬರಬೇಕು. ಎಷ್ಟು ಬೊಂಬು ಲಭ್ಯ ಆಗುತ್ತದೆಯೋ ಆ ಪ್ರಕಾರ ಕೊಡುತ್ತೇವೆ. ಕನಿಷ್ಠ 50 ಕೊಡುತ್ತೇವೆ. ಜಾಸ್ತಿ ಇದ್ದರೆ 100 ಕೊಡುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜು: ನಾವು ಕುಲಕಸುಬನ್ನು ನಂಬಿಕೊಂಡಿರುವುದರಿಂದ 50 ಕೊಡುತ್ತೇನೆ 100 ಕೊಡುತ್ತೇನೆ ಎಂಬ ದ್ವಂದ್ವ ಬೇಕಾಗಿಲ್ಲ. ವಹಿವಾಟು ವರ್ಷಕ್ಕೆ 226 ಲಕ್ಷ ರೂ. ಇದೆ. ನೀವು ಬೇರೆಯವರಿಗೆ ಕೊಡುತ್ತೀರಿ, ಏಕೆಂದರೆ ಬೇರೆಯವರು ಏನು ಅನುಕೂಲ ಮಾಡಿಕೊಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಕುಲಕಸುಬಿನವರಿಗೆ ಕನಿಷ್ಠ 100 ಬೊಂಬು ಕೊಡುವ ವ್ಯವಸ್ಥೆ ಮಾಡಬೇಕು ಎಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಪರಿಶಿಷ್ಟ ಜಾತಿ ವರ್ಗದವರು ಮೇದ ಜನಾಂಗದವರು ಇವತ್ತು ಬಹಳ ಬಡತನದಲ್ಲಿದ್ದಾರೆ. ಅವರಿಗೆ ಐಡೆಂಟಿಟಿ ಕಾರ್ಡ್ ಪರ್ಮಿಟ್ ಕೊಡುವುದನ್ನು ಮಾಡಿಬಿಟ್ಟರೆ ನಿಮಗೂ ಕೆಲಸ ಸುಲಭವಾಗುತ್ತದೆ, ಅವರಿಗೂ ವ್ಯವಸ್ಥೆ ಸರಿಯಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಇದು ಒಳ್ಳೆಯದು ಇದರ ಬಗ್ಗೆ ಮಾಡುತ್ತೇನೆ. ಅವರು ಇನ್ನೊಂದು ಹೇಳಿದರು ನೂರೇ ಕೊಡಬೇಕೆಂದು, ಲಭ್ಯ ಇದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದು ಕಷ್ಟ.

ವಿಷಯ: ಬಾದಾಮಿಗೆ ಹೊಸ ಆಯುರ್ವೇದ ಕಾಲೇಜಿನ ಮಂಜೂರಾತಿ.